ದಿ: 05-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು**: ಪ್ರತಿವಾದಿಗಳ ಪರ ಶ್ರೀಯುತ ಎ.ಜಿ.ಎನ್. ವಕೀಲರಿಂದ.

ಜೋಗಪ್ಪ ಎನ್ನುವವರಿಗೆ ದೊಡ್ಡಮುನಿಶ್ಯಾಮಿ, ಚಿಕ್ಕಮುನಿಶ್ಯಾಮಿ ಮತ್ತು ಮುನಿಯಪ್ಪ ಎನ್ನುವ ಮೂರು ಜನ ಮಕ್ಕಳು ಎಂದರೆ ಸರಿ. ಸದರಿ ಮೂರು ಜನರ ಮಕ್ಕಳ ಪೈಕಿ ಚಿಕ್ಕ ಮುನಿಶ್ಯಾಮಿರವರು ನನ್ನ ತಾತ ಎನ್ನುತ್ತಾರೆ. ಸದರಿ ಚಿಕ್ಕಮುನಿಶ್ಯಾಮಿ ರವರಿಗೆ ಹನುಮಂತರಾಯಪ್ಪ ಎನ್ನುವ ಒಬ್ಬ ಮಗ ಮತ್ತು ಲಕ್ಷ್ಮಮ್ಮ ಹಾಗೂ ಜಯಮ್ಮ ಎನ್ನುವ ಇಬ್ಬರು ಹೆಣ್ಣು ಮಕ್ಕಳು ಇದ್ದರು. ನಾನು ಲಕ್ಷ್ಮಮ್ಮರವರ ಮಗನಾಗಿರುತ್ತೇನೆ. ಹನುಮಂತರಾಯಪ್ಪರವರಿಗೆ ಮಕ್ಕಳು ಇರುತ್ತಾರೆ. ಸದರಿ ಜೋಗಪ್ಪನ ಮಕ್ಕಳು ತಮ್ಮ ಕುಟುಂಬದ ಆಸ್ತಿಯ ವಿಭಾಗದ ಕುರಿತು ದಾವೆ ದಾಖಲಿಸಿದ್ದರು ಎಂದರೆ ಸರಿ. ಸದರಿ ಜೋಗಪ್ಪರವರ ಮಕ್ಕಳು ದಾಖಲಿಸಿದ್ದ ದಾವೆಯ ಕ್ರಮಸಂಖ್ಯೆ ಓ.ಎಸ್. 525/1962 ಎಂದರೆ ಸರಿ. ಸದರಿ ದಾವೆಯಲ್ಲಿ ಜೋಗಪ್ಪನವರ ಎಲ್ಲಾ ಮಕ್ಕಳ ನಡುವೆ ಆಸ್ತಿಗಳು ವಿಭಾಗ ಆಗಬೇಕೆಂದು ತೀರ್ಮಾನ ಆಗಿತ್ತು ಎಂದರೆ ಸರಿ. ಸದರಿ ಜೋಗಪ್ಪರವರ ಮಗನಾದ ಮುನಿಯಪ್ಪರವರು ತನ್ನ ಹಿಸ್ಸೆಗೆ ಬಂದ ಜಮೀನ್ನನ್ನು ಗುರುತಿಸಿಕೊಡುವಂತೆ ಅಂತಿಮ ಅಮಲಜಾರಿ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಆ ರೀತಿ ಅಂತಿಮ ಅಮಲಜಾರಿ ಪ್ರಕರಣ ದಾಖಲಿಸಿದ ದಿನದಿಂದ ಇಲ್ಲಿಯವರೆಗೂ ಯಾವುದೇ ವಿಂಗಡನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನ್ಯಾಯಾಲಯದ ತೀರ್ಪಿನಂತೆ ವಿಂಗಡನೆ ಆಗಿರುತ್ತದೆ. ಆ ರೀತಿ ಯಾವ ಪ್ರಕರಣದಲ್ಲಿ ಮತ್ತು ಯಾವ ಸಾಲಿನಲ್ಲಿ ವಿಂಗಡನೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ವಿಂಗಡನೆ ಆದ ಕುರಿತು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಅವುಗಳು ನನ್ನ ಬಳಿ ಇರುವುದಿಲ್ಲ. ಸದರಿ ಜೋಗಪ್ಪರವರ ಮಕ್ಕಳು ಕಂದಾಯ ಇಲಾಖೆಯಲ್ಲಿ ತಮ್ಮ ಹೇಳಿಕೆಗಳನ್ನು ನೀಡಿ ತಮ್ಮ ಪಾಲಿನ ಸ್ವಾಧೀನಾನುಭವದ ಜಮೀನುಗಳನ್ನು ತಮ್ಮ ಹೆಸರಿಗೆ ವಿಂಗಡನೆ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಜೋಗಪ್ಪರವರ ಕುಟುಂಬದ ಜಮೀನುಗಳು ಅವರ ಮಕ್ಕಳ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ಸರಿ.

2. ಸರ್ವೆ ನಂ.3/2 ಜಮೀನು 2.06 ಎಕರೆ ವಿಸ್ತೀರ್ಣ ಹೊಂದಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.3/2 ಜಮೀನಿನ ಒಟ್ಟು ವಿಸ್ತೀರ್ಣದ ಪೈಕಿ 0.27 ಗುಂಟೆ ಜಮೀನು ಹರಿಜನರ ಕಾಲೋನಿಗೆ ಸ್ವಾಧೀನ ಮಾಡಿಕೊಡಲಾಗಿರುತ್ತದೆ ಎಂದರೆ ಸರಿ. ಸದರಿ ಸರ್ವೆ ನಂ.3/2 ವಿಸ್ತೀರ್ಣ 2.6 ಎಕರೆ ಜಮೀನಿನ ಪಶ್ಚಿಮ ದಿಕ್ಕಿನಲ್ಲಿ 27 ಗುಂಟೆ ಜಮೀನ್ನನ್ನು ಸ್ವಾಧೀನ ಮಾಡಿಕೊಳ್ಳಲಾಗಿತ್ತು ಎಂದರೆ ಸರಿ. ಆ ರೀತಿ ಸ್ವಾಧೀನ ಪಡಿಸಿಕೊಳ್ಳಲಾದ ಜಮೀನಿನಲ್ಲಿ ಹರಿಜನರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು ಮತ್ತು ಹಂಚಿಕೆ ಪಡೆದವರು ಸದರಿ ನಿವೇಶನಗಳಲ್ಲಿ ಮನೆ ಕಟ್ಟಿಕೊಂಡು ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಜೋಗಪ್ಪನ ಮಕ್ಕಳು ಭೂ ಸ್ವಾಧೀನವಾದ 0.27 ಗುಂಟೆ ಜಮೀನ್ನನ್ನು

ಸೇರಿಸಿಕೊಂಡು ವಿಭಾಗ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ರೀತಿ ಜೋಗಪ್ಪನ ಮಕ್ಕಳು ಭೂ ಸ್ವಾಧೀನವಾದ ಜಮೀನ್ನನ್ನು ಸೇರಿಸಿ ವಿಭಾಗ ಮಾಡಿಕೊಂಡ ಮೇರೆಗೆ ಪ್ರತಿವಾದಿಗಳ ತಂದೆ ಮತ್ತು ಪ್ರತಿವಾದಿಗಳು ಡಿ.ಡಿ.ಎಲ್.ಆರ್.ರವರ ಮುಂದೆ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಪ್ರತಿವಾದಿಗಳು ಅರ್ಜಿ ಸಲ್ಲಿಸಿದ ನಂತರ ಭೂ ಸ್ವಾಧೀನವಾಗಿದ್ದ ಜಮೀನಿಗೆ ಸಂಬಂಧಿಸಿದ ಎಲ್ಲಾ ಹಿಸ್ಸಾಗಳನ್ನು ವಜಾ ಮಾಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಅಕ್ಕ ತಂಗಿಯರು ಡಿ.ಡಿ.ಎಲ್.ಆರ್ ರವರ ಆದೇಶದ ವಿರುದ್ದ ಜೆ.ಡಿ.ಎಲ್.ಆರ್ ರವರಿಗೆ ಮೇಲ್ಮನವಿ ಸಲ್ಲಿಸಿದ್ದು ಮತ್ತು ಅದು ವಜಾ ಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ ನಂಜಮ್ಮರವರು ಕರೆದುಕೊಂಡು ಬಂದಿರುತ್ತಾರೆ. ನಾನು ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ಪ್ರಸ್ತುತ ದಾವೆಯ ಕುರಿತು ಮತ್ತು ಹಾಜರುಪಡಿಸಿರುವ ದಾಖಲೆಗಳ ಕುರಿತು ಕೇಳಿ ತಿಳಿದುಕೊಂಡಿರುತ್ತೇನೆ. ಆ ರೀತಿ ನಾನು ಪ್ರಸ್ತುತ ದಾವೆಯ ಕುರಿತು ತಿಳಿದುಕೊಳ್ಳುವ ಸಮಯದಲ್ಲಿ ಡಿ.ಡಿ.ಎಲ್.ಆರ್. ಮತ್ತು ಜೆ.ಡಿ.ಎಲ್.ಆರ್. ರವರ ಆದೇಶದ ಕುರಿತು ತಿಳಿದುಕೊಂಡಿರುವುದಿಲ್ಲ. ನಾನು ಪ್ರಸ್ತುತ ವರ್ಷವಾದ 2024ರ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ನೋಡಿರುತ್ತೇನೆ. ದಾವಾ ಆಸ್ತಿಯ ಪಹಣಿ ಪತ್ರಿಕೆ ವಿಜಯ ಕುಮಾರಿರವರ ಹೆಸರಿನಲ್ಲಿ ಬರುತ್ತಿರುತ್ತದೆ. ದಾವಾ ಅನುಸೂಚಿ ಆಸ್ತಿ ಸರ್ವೆ 3/2ಬಿ6 ವಿಸ್ತೀರ್ಣ 4.3/4 ಜಮೀನಿನ ಪ್ರಸ್ತುತ ವರ್ಷದ ಪಹಣಿ ಪತ್ರಿಕೆಯನ್ನು ನೋಡಿರುವುದಿಲ್ಲ. 2023 ನೇ ಸಾಲಿನಲ್ಲಿ ಡಿ.ಡಿ.ಎಲ್.ಆರ್. ಆದೇಶದಂತೆ ದಾವಾ ಆಸ್ತಿ ಸರ್ವೆ ನಂಬರ್ ನ ಎಲ್ಲಾ ಹಿಸ್ಸಾಗಳನ್ನು ರದ್ದು ಪಡಿಸಿ ಸರ್ವೆ ನಂ.3/2 ಎಂದು ಮರು ಸರ್ವೆ ನಂಬರ್ ನೀಡಲಾಗಿರುತ್ತದೆ ಎಂದರೆ ಸರಿ. ಈಗ ನನಗೆ ತೋರಿಸಿದ ನಿ.ಡಿ.೧ ದಾಖಲೆಯು ಸದರಿ ಮರು ಸರ್ವೆ ನಂಬರ್ ಮಾಡಲಾದ ಜಮೀನಿನ ಪಹಣಿ ಪತ್ರಿಕೆ ಎಂದರೆ ಸರಿ. ಸದರಿ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ಇತರೆ ವಾದಿಗಳ ಹೆಸರುಗಳು ಬರುತ್ತಿವೆ ಎಂದರೆ ಸರಿ.

3. 2015 ನೇ ಸಾಲಿನಲ್ಲಿ ಪೊಡಿ ರದ್ದಾದ ನಂತರ ಎಲ್ಲಾ ಸರ್ವೆ ನಂಬರ್ ಗಳನ್ನು ಒಟ್ಟುಗೂಡಿಸಲಾಗಿರುತ್ತದೆ ಎಂದರೆ ಸರಿ. ಆ ರೀತಿ ಮೂಲ ಸರ್ವೆ ನಂಬರ್ 3/2 ರಲ್ಲಿ ಒಟ್ಟುಗೂಡಿಸಲಾಗಿರುತ್ತದೆ ಎಂದರೆ ಸರಿ. ಸದರಿ ಒಟ್ಟು ಗೂಡಿಸಿದ ಪಹಣಿ ಪತ್ರಿಕೆಯಲ್ಲಿ ನನ್ನ ಮತ್ತು ಪ್ರಸ್ತುತ ದಾವೆಯ ಪಕ್ಷಗಾರರ ಹೆಸರು ನಮೂದಾಗಿರುತ್ತದೆ ಎಂದರೆ ಸರಿ. ಸದರಿ ಒಟ್ಟುಗೂಡಿಸಿದ ಪಹಣಿ ಪತ್ರಿಕೆಯಲ್ಲಿ ನಂಜಪ್ಪರವರಿಗೆ 25 ಗುಂಟೆ ಜಮೀನ್ನನ್ನು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ನಾನು ಆ ರೀತಿ ಒಟ್ಟು ಗೂಡಿಸುವ ಕುರಿತು ಆದೇಶವಾದ ನಂತರ ಪೊಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ. ಆ ರೀತಿ ಪಹಣಿ ಪತ್ರಿಕೆಯನ್ನು ಒಟ್ಟು ಗೂಡಿಸುವ ಕುರಿತು ಆದೇಶವಾದ ನಂತರ ವಾದಿಯು ಪೊಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಸರ್ವೆ ನಂಬರಗಳನ್ನು ಒಟ್ಟುಗೂಡಿಸಿದ ನಂತರ ಸರ್ವೆ ನಕ್ಷೆಗಳನ್ನು ಒಟ್ಟು ಗೂಡಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಆ ರೀತಿ ಪಹಣಿ ಪತ್ರಿಕೆಗಳನ್ನು ಮತ್ತು ಸರ್ವೆ ದಾಖಲೆಗಳನ್ನು ಒಟ್ಟು ಗೂಡಿಸಿದ ಮೇರೆಗೆ ಯಾರ ಆಸ್ತಿಗಳು ಎಲ್ಲಿವೆ ಎಂದು ಗುರುತಿಸಲು ಆಗುವುದಿಲ್ಲ ಎಂದರೆ

ನನಗೆ ಗೊತ್ತಿಲ್ಲ. ನಾನು ಆ ರೀತಿ ಒಟ್ಟು ಗೂಡಿಸುವ ಆದೇಶವಾದ ಮೇರೆಗೆ ವಾದಿಯ ಬಳಿ ಪೋಡಿ ಕುರಿತು ಪ್ರತ್ಯೇಕ ಅರ್ಜಿ ಸಲ್ಲಿಸುವ ಕುರಿತು ವಿಚಾರಿಸಿರುವುದಿಲ್ಲ. ವಾದಿಯು ದಾವೆಯನ್ನು ಸರ್ವೆ ನಂಬರ್ 3/2 ಜಮೀನಿನ ಮೇಲೆ ಮಾಡಿರುತ್ತಾರೆ. ನಾನು ನ್ಯಾಯಾಲಯಕ್ಕೆ ಬರುವ ಪೂರ್ವದಲ್ಲಿ ವಾದಿಯು ಯಾವ ಸರ್ವೆ ನಂಬರ್ ಮತ್ತು ಎಷ್ಟು ವಿಸ್ತೀರ್ಣದ ಮೇಲೆ ದಾವೆ ದಾಖಲಿಸಿರುತ್ತಾರೆ ಎನ್ನುವ ವಿಚಾರವನ್ನು ತಿಳಿದುಕೊಂಡು ಬಂದಿರುತ್ತೇನೆ. ಆ ರೀತಿ ವಾದಿಯು ಸರ್ವೆ ನಂ.3/2 ಜಮೀನಿನ ಮೇಲೆ ದಾವೆ ಮಾಡಿರುತ್ತಾರೆ. ಆ ರೀತಿ ವಾದಿಯು ಸರ್ವೆ ನಂ.3/2 ಜಮೀನಿನ ಪೂರ್ವ ಪಶ್ಚಿಮ ದಿಕ್ಕಿನ ಜಮೀನಿನ ಮೇಲೆ ದಾವೆ ದಾಖಲಿಸಿರುತ್ತಾರೆ. ಸದರಿ ವಾದಿಯು ದಾವೆ ದಾಖಲಿಸಿದ್ದಾರೆ ಎಂದು ಹೇಳುವ ಜಮೀನು ಸರ್ವೆ ನಂ.3/2 ಜಮೀನಿನ ಚಕ್ಕುಬಂದಿಗಳು ತಿಳಿದಿವೆ. ಜೋಗಪ್ಪನ ಮೂರು ಮಕ್ಕಳು ಸರ್ವೆ ನಂ.3/2 ಜಮೀನ್ನನ್ನು ಪೂರ್ವ ಪಶ್ಚಿಮಾಭೀಮುಖವಾಗಿ ಮೂರು ಭಾಗಗಳಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿಯ ತಾಯಿ ಬರೆದುಕೊಟ್ಟಿದ್ದಾರೆ ಎಂದು ಹೇಳುವ ದಾನ ಪತ್ರದಲ್ಲಿ ಕಾಣಿಸಿರುವ ಆಸ್ತಿಯಲ್ಲಿ ಸದರಿ ಜೋಗಪ್ಪನ ಮಕ್ಕಳ ಪೈಕಿ ನಂಜಪ್ಪರವರ ಭಾಗಕ್ಕೆ ಬಂದಿದ್ದ ಜಮೀನ್ನನ್ನು ಸೇರಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ನಂಜಪ್ಪ ರವರಿಗೆ ಬಂದಿದ್ದ ಭಾಗವನ್ನು ಮುನಿಯಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ ಮುನಿಯಪ್ಪರವರಿಗೆ ನಂಜಪ್ಪರವರ ಭಾಗವನ್ನು ಮಾರಾಟ ಮಾಡಲಾಗಿತ್ತು ಎಂದು ಹೇಳುವ ಕ್ರಯದ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ಮುನಿಯಪ್ಪರವರು ಖರೀದಿಸಿದ್ದಾರೆ ಎಂದು ಹೇಳುವ ಜಮೀನಿನ ಕ್ರಯ ಪತ್ರವು ಮುನಿಯಪ್ಪ ರವರ ವಾರಸದಾರ ಬಳಿ ಇರುತ್ತದೆ. ಆ ರೀತಿ ಕ್ರಯ ಪತ್ರವು ನಿರ್ದಿಷ್ಟವಾಗಿ ಯಾರ ಬಳಿ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಮುನಿಯಪ್ಪರವರ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ ಮತ್ತು ಸದರಿ ವಿಚಾರವನ್ನು ತಿಳಿದುಕೊಂಡಿರುತ್ತೇನೆ. ನಾನು ಈ ಮೇಲೆ ಹೇಳಿದಂತೆ ನಂಜಪ್ಪರವರು ಮುನಿಯಪ್ಪರವರಿಗೆ ಯಾವುದೇ ಕ್ರಯ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಮತ್ತು ನಾನು ಆ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ನಂಜಪ್ಪರವರು ಮುನಿಯಪ್ಪರವರಿಗೆ ಯಾವುದೇ ಕ್ರಯ ಪತ್ರವನ್ನು ಮಾಡಿಕೊಡದ ಮೇರೆಗೆ ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಬೈಯಮ್ಮ ರವರ ಇನ್ನಿತರ ಮಕ್ಕಳಿಗೆ ಬರೆದುಕೊಟ್ಟ ದಾನ ಪತ್ರದ ಆಸ್ತಿಯಲ್ಲಿ ಸದರಿ ನಂಜಪ್ಪರವರ ಭಾಗಕ್ಕೆ ಹೋಗಿರುವ ಆಸ್ತಿಯು ಸೇರಿರುತ್ತದೆ ಎಂದರೆ ಸರಿ. ಆ ರೀತಿ ವಾದಿಯು ತನ್ನ ತಾಯಿಯಿಂದ ಪಡೆದುಕೊಂಡ ದಾನ ಪತ್ರದ ಮೇರೆಗೆ ಸರ್ವೆ ನಂ.3/2 ಜಮೀನಿನ ಪೂರ್ವ ಪಶ್ಚಿಮ ದಿಕ್ಕಿನಲ್ಲಿ ದಾವೆ ದಾಖಲಿಸಿರುತ್ತಾರೆ. ವಾದಿಯು ದಾಖಲಿಸಿರುವ ಜಮೀನಿನ ವಿಸ್ತೀರ್ಣದ ಸ್ವಾಧೀನದಲ್ಲಿರುವುದಿಲ್ಲ ಮತ್ತು ನಾನು ವಾದಿಯ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾದಿಯ ತಾಯಿಯಾದ ಬೈಯಮ್ಮ ರವರಿಗೆ ದಾನ ಪತ್ರ ಮಾಡುವ ಯಾವುದೇ ಹಕ್ಕು ಇರಲಿಲ್ಲ ಮತ್ತು ಸದರಿ ಬೈಯ್ಯಮ್ಮ ರವರು ಸ್ವಾಧೀನದಲ್ಲಿರದ ಜಮೀನಿನ ಮೇಲೆ ದಾನ ಪತ್ರ ಮಾಡಿರುತ್ತಾರೆ ಹಾಗೂ ನಾನು ಸದರಿ ಖೊಟ್ಟಿ ದಾನ ಪತ್ರದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬೈಯಮ್ಮ ರವರಿಗೆ ವಾದಿ ಮತ್ತು ತನ್ನ ಇತರರ ಮಕ್ಕಳಿಗೆ ದಾನ ಪತ್ರ ಮಾಡುವ

ಯಾವುದೇ ಹಕ್ಕು ಇರಲಿಲ್ಲ ಮತ್ತು ಅವರು ದಾನ ಪತ್ರದಲ್ಲಿ ಕಾಣಿಸಿರುವ ಆಸ್ತಿಯ ವಿಸ್ತೀರ್ಣದಲ್ಲಿ ಸ್ವಾಧೀನ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಂದ ಸರ್ವೆ ನಂ.1/1 ವಿಸ್ತೀರ್ಣ 0.26 ಗುಂಟೆ ಜಮೀನ್ನನ್ನು ಖರೀದಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಹೆಂಡ್ತಿ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂ.1/1 ಜಮೀನಿನ ವಿಸ್ತೀರ್ಣದ ಪೈಕಿ ಆರುವರೆ ಗುಂಟೆ ಜಮೀನು ೩ನೇ ಪ್ರತಿವಾದಿಯ ಹೆಸರಿನಲ್ಲಿ ಮತ್ತು 3 ಗುಂಟೆ ಜಮೀನು ೩ನೇ ಪ್ರತಿವಾದಿಯ ಮಗನಾದ ಸಂದೀಪ್ ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸದರಿ ೩ನೇ ಪ್ರತಿವಾದಿಯ ಅಣ್ಣನ ಹೆಸರಿನಲ್ಲಿದ್ದ ಆರುವರೆ ಗುಂಟೆ ಜಮೀನ್ನನ್ನು ನನ್ನ ಹೆಂಡ್ತಿ ಖರೀದಿಸಿರುತ್ತಾಳೆ ಎಂದರೆ ಸರಿ. ಆ ರೀತಿ ನಾನು ಮತ್ತು ನನ್ನ ಹೆಂಡ್ತಿ ಜಮೀನು ಖರೀದಿಸಿದ ನಂತರ ಉಳಿಕೆ ಜಮೀನ್ನನ್ನು ನಮಗೆ ಮಾರುವಂತೆ ೩ನೇ ಪ್ರತಿವಾದಿಯ ಬಳಿ ಕೇಳಿದ್ದೇವೆ ಎಂದರೆ ಸರಿಯಲ್ಲ. ಸದರಿ ರಾಜಣ್ಣರವರು ನಮಗೆ ಜಮೀನು ಮಾರಾಟ ಮಾಡುವುದಿಲ್ಲ ಎಂದು ತಿಳಿಸಿದ ಮೇರೆಗೆ ಅವರ ವಿರುದ್ದ ದ್ವೇಷ ಸಾಧಿಸುವ ಸಲುವಾಗಿ ಪ್ರಸ್ತುತ ದಾವೆಯಲ್ಲಿ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

4. ವಾದಿಯು ಪ್ರಸ್ತುತ ದಾವೆಯನ್ನು ಸರ್ವೆ ನಂ.3/2 ವಿಸ್ತೀರ್ಣ 5 ಗುಂಟೆ ಜಮೀನಿನ ಮೇಲೆ ಮಾಡಿರುತ್ತಾರೆ. ಸದರಿ ದಾವಾ ಆಸ್ತಿಯ ಚಕ್ಕುಬಂದಿಗಳು ತಿಳಿದಿವೆ ಮತ್ತು ಅವುಗಳು ಪೂರ್ವಕ್ಕೆ ಪಾರ್ವತಮ್ಮ ರವರ ಜಮೀನು, ಪಶ್ಚಿಮಕ್ಕೆ ನಂಜಮ್ಮ ರವರ ಜಮೀನು, ಉತ್ತರಕ್ಕೆ ಚಿಕ್ಕಕಲ್ಲಪ್ಪ ರವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮ ಜಮೀನು ಇರುತ್ತದೆ. ಸದರಿ ಉತ್ತರಕ್ಕೆ ಚಿಕ್ಕಕಲ್ಲಪ್ಪರವರ ಜಮೀನು ಇರುವುದಿಲ್ಲ ಮತ್ತು ಪ್ರತಿವಾದಿಗಳಾದ ನಂಜಪ್ಪರವರ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ವಾದಿ ಮತ್ತು ಇತರರು ದಾನ ಪತ್ರದ ಚಕ್ಕುಬಂದಿಯ ಉತ್ತರ ದಿಕ್ಕಿನಲ್ಲಿರುವ ಪ್ರತಿವಾದಿ ನಂಜಪ್ಪರವರ ಜಮೀನ್ನನ್ನು ಕಬಳಿಸುವ ಸಲುವಾಗಿ ನಕ್ಷೆ ಮಾಡಿಸಿಕೊಂಡು ಸುಳ್ಳು ಚಕ್ಕುಬಂದಿಗಳನ್ನು ಕಾಣಿಸಿ ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತಾರೆ ಮತ್ತು ಆ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ವಾದಿ ಮತ್ತು ಇತರರು ಸುಳ್ಳು ನಕ್ಷೆಗಳನ್ನು ಸೃಷ್ಟಿ ಮಾಡಿಕೊಂಡ ನಂತರ ಪ್ರತಿವಾದಿ ನಂಜಪ್ಪರವರು ಡಿ.ಡಿ.ಎಲ್. ಆರ್. ರವರಿಗೆ ಸದರಿ ನಕ್ಷೆಗಳ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಮತ್ತು ಸದರಿ ಮೇಲ್ಮನವಿ ಪುರಸ್ಕಾರಗೊಂಡು ನಕ್ಷೆಗಳು ವಜಾಗೊಂಡಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿ.ಡಿ.ಎಲ್.ಆರ್ ರವರ ಮುಂದೆ ಸಲ್ಲಿಸಿದ ಮೇಲ್ಮನವಿ ಅರ್ಜಿಯಲ್ಲಿ ನಾನು ಒಬ್ಬ ಪಕ್ಷಗಾರನಾಗಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಗಮನಕ್ಕೆ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಈ ಮೇಲಿನ ಎಲ್ಲಾ ವಿಚಾರಗಳು ತಿಳಿದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯ ದಾವಾ ವಿಸ್ತೀರ್ಣ ಮತ್ತು ಚಕ್ಕುಬಂದಿಗಳು ಅಸ್ತಿತ್ವದಲ್ಲಿರುವುದಿಲ್ಲ ಮತ್ತು ಅವುಗಳ ಆರ್.ಟಿ.ಸಿ ಮತ್ತು ಸರ್ವೆ ದಾಖಲೆಗಳು ಮೂಲ ಸರ್ವೆ ನಂಬರನಲ್ಲಿ ವಿಲೀನ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಈ ಮೇಲಿನ ಎಲ್ಲಾ ವಿಚಾರಗಳು ತಿಳಿದಿದ್ದರು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಯಾವ ಸರ್ವೆ ನಂಬರ್ ಮೇಲೆ ದಾವೆ ಮಾಡಿರುತ್ತಾರೆಂದು ಕೇಳಿ ತಿಳಿದುಕೊಂಡಿರುವುದಿಲ್ಲ. ವಾದಿಯು ನಾಲ್ಕುವರೆ ಗುಂಟೆ ಜಮೀನು

ಕುರಿತು ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂ.3/2 ಜಮೀನಿನ ಪೂರ್ವ ದಿಕ್ಕಿಗೆ ವಾದಿಯು ದಾನ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ. ಚಿಕ್ಕಮುನಿಶ್ವಾಮಿ , ಮುನಿಯಪ್ಪ ಮತ್ತು ನಂಜಪ್ಪ ರವರುಗಳು ಪೂರ್ವಪಶ್ಚಿಮಾಭೀಮುಖವಾಗಿ ವಿಭಾಗ ಮಾಡಿಕೊಂಡಿರುತ್ತಾರೆ. ಸರ್ವೆ ನಂ.3/2 ಜಮೀನಿನ ಉತ್ತರ ದಿಕ್ಕಿಗೆ ನಂಜಪ್ಪರವರ ಹೆಸರಿಗೆ ಭಾಗ ನೀಡಿದ್ದು ಮತ್ತು ಆ ಕುರಿತು 25 ಗುಂಟೆ ಜಮೀನು ಅವರ ಹೆಸರಿನಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಂಜಪ್ಪರವರಿಗೆ ನೀಡಿದ ಜಾಗದ ದಕ್ಷಿಣ ದಿಕ್ಕಿಗೆ ಮುನಿಯಪ್ಪರವರಿಗೆ ಜಮೀನು ಭಾಗವಾಗಿ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮುನಿಯಪ್ಪರವರಿಗೆ ನೀಡಿದ ಜಾಗದ ದಕ್ಷಿಣ ದಿಕ್ಕಿಗೆ ಚಿಕ್ಕ ಮುನಿಶ್ವಾಮಿರವರಿಗೆ ಜಮೀನು ಭಾಗವಾಗಿ ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ನಂಜಪ್ಪ, ಮುನಿಯಪ್ಪ ಮತ್ತು ಮುನಿಶ್ವಾಮಿರವರು ಭಾಗ ಮಾಡಿಕೊಂಡಿರುವ ಜಮೀನಿನ ಪಶ್ಚಿಮ ದಿಕ್ಕಿಗೆ 27 ಗುಂಟೆ ಜಮೀನ್ನನ್ನು ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ ಎಂದರೆ ಸರಿ.

5. ಆ ರೀತಿ ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾಗಿದ್ದ ಜಮೀನ್ನನ್ನು ಸೇರಿಸಿಕೊಂಡು ಸದರಿ ನಂಜಪ್ಪ ಮತ್ತು ಇತರರು ತಮ್ಮ ಹೆಸರಿಗೆ ಪಹಣಿ ಪತ್ರಿಕೆ ಮಾಡಿಸಿಕೊಂಡಿದ್ದರು ಎಂದರೆ ಸರಿ. ಆ ರೀತಿ ಚಿಕ್ಕ ಮುನಿಶ್ವಾಮಿಗೆ 25 ಗುಂಟೆ ಜಮೀನು, ನಂಜಪ್ಪನ ಭಾಗಕ್ಕೆ 29 ಗುಂಟೆ ಮತ್ತು ಮುನಿಯಪ್ಪ ರವರ ಭಾಗಕ್ಕೆ 29 ಗುಂಟೆ ಜಮೀನಿನ ಪಹಣಿ ಪತ್ರಿಕೆಗಳನ್ನು ಮಾಡಿಸಿಕೊಂಡಿದ್ದರು ಎಂದರೆ ಸರಿ. ಸದರಿ ನಂಜಪ್ಪ ಮತ್ತು ಇತರರು ಪಹಣಿ ಪತ್ರಿಕೆಯಲ್ಲಿ ಕಾಣಿಸಿದ ವಿಸ್ತೀರ್ಣದ ಸ್ವಾಧೀನದಲ್ಲಿ ಇರದೇ ಇದ್ದರೂ ಹೆಚ್ಚಿನ ವಿಸ್ತೀರ್ಣವನ್ನು ತಮ್ಮ ಹೆಸರಿಗೆ ನಮೂದು ಮಾಡಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವಲ್ಪ ಸಮಯದ ನಂತರ ನಾನು 25 ಗುಂಟೆ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಪಹಣಿ ಪತ್ರಿಕೆಯಲ್ಲಿ ತಪ್ಪಾಗಿ ನಮೂದಿಸಿರುವುದನ್ನು ಸರಿಪಡಿಸುವ ಕುರಿತು ನೀವಾಗಲಿ ಅಥವಾ ವಾದಿಯಾಗಲಿ ದಾವೆ ದಾಖಲಿಸಿದ್ದೀರಾ ಎಂದರೆ ಸಾಕ್ಷಿಯು ನನ್ನ ಅಜ್ಜ ನೀಡಿದ 25 ಗುಂಟೆ ಜಮೀನಿನ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮುನಿಯಪ್ಪರವರು ಬೈಯಮ್ಮ ರವರ ತಂದೆ ಎಂದರೆ ಸರಿ. ನಂಜಮ್ಮ, ಪಾರ್ವತಮ್ಮ ಮತ್ತು ಗೌರಮ್ಮ ರವರುಗಳು ಸದರಿ ಬೈಯಮ್ಮ ರವರ ಮಕ್ಕಳು ಎಂದರೆ ಸರಿ. ವಾದಿ ಸದರಿ ಬೈಯಮ್ಮರವರ ಮೊಮ್ಮಗಳು ಎಂದರೆ ಸರಿ. 1977 ರಲ್ಲಿ ಮಾಡಲಾದ ಜಮೀನಿನ ಹೆಚ್ಚುವರಿ ವಿಸ್ತೀರ್ಣದ ಕುರಿತು ವಾದಿ ಮತ್ತು ಇತರರು ದಾವೆ ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಮುನಿಯಪ್ಪರವರು ಸ್ವಾಧೀನದಲ್ಲಿದ್ದಾರೆ ಎಂದು ಹೇಳುವ 29 ಗುಂಟೆ ಜಮೀನಿನ ಸ್ವಾಧೀನದಲ್ಲಿರುವುದಿಲ್ಲ ಮತ್ತು ಹರಿಜನ ಕಾಲೋನಿಗೆ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿನ ವಿಸ್ತೀರ್ಣವನ್ನು ಹೊರತುಪಡಿಸಿದರೆ ಕೇವಲ ಹದಿನೆಂಟುವರೆ ಗುಂಟೆ ವಿಸ್ತೀರ್ಣದ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಬೈಯಮ್ಮ ರವರು ತಮ್ಮ ತಂದೆಯು 25 ಗುಂಟೆ ವಿಸ್ತೀರ್ಣದ ಸ್ವಾಧೀನದಲ್ಲಿ ಇರದೇ ಇದ್ದರೂ ತನ್ನ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಹೆಚ್ಚಿನ ವಿಸ್ತೀರ್ಣಕ್ಕೆ ದಾನ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಮುನಿಯಪ್ಪರವರು ಕೇವಲ

ಹದಿನೆಂಟುವರೆ ಗುಂಟೆ ಜಮೀನಿನ ವಿಸ್ತೀರ್ಣದಲ್ಲಿದ್ದರು ಹೆಚ್ಚಿನ ವಿಸ್ತೀರ್ಣದ ಕುರಿತು ಬೈಯಮ್ಮ ರವರು ವಾದಿ ಮತ್ತು ಇತರರಿಗೆ ದಾನ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಆ ರೀತಿ ವಿಸ್ತೀರ್ಣಗಳು ತಾಳೆಯಾಗದ ಮೇರೆಗೆ ಡಿ.ಡಿ.ಎಲ್.ಆರ್ ರವರಿಗೆ ಮೇಲ್ಮನವಿ ಸಲ್ಲಿಸಿ ಹಿಸ್ಸೆಗಳನ್ನು ವಜಾ ಮಾಡಿಸಿರುತ್ತಾರೆ ಎಂದರೆ ಸರಿ. ನಾನು ನನ್ನ ಪ್ರಮಾಣ ಪತ್ರದಲ್ಲಿ ನಿರ್ದಿಷ್ಟ ವಿಸ್ತೀರ್ಣದ ಕುರಿತು ಕಾಣಿಸಿರುವುದಿಲ್ಲ ಎಂದರೆ ಸರಿ. ಮುನಿಯಪ್ಪ ಮತ್ತು ಅವರ ಮಗಳು ಬೈಯಮ್ಮ ರವರಿಗೆ ಸರ್ವೆ ನಂ.3/2 ಜಮೀನಿನಲ್ಲಿ 1.2 ಎಕರೆ ವಿಸ್ತೀರ್ಣ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ವಿಸ್ತೀರ್ಣದ ವಿಚಾರವನ್ನು ವಾದಿ ತಿಳಿಸಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವ ಸರ್ವೆ ನಂ.3/2ಬಿ೧ ಮತ್ತು ಹೊಸ ಸರ್ವೆ ನಂಬರ್ 3/2ಬಿಳ ಸರ್ವೆ ನಂಬರ್ ಪ್ರಸ್ತುತ ಇರುವುದಿಲ್ಲ ಎಂದರೆ ಸರಿ. ಪ್ರಸ್ತುತ ಜಮೀನು ಖಾಲಿ ಇದೆ ಎಂದರೆ ಸರಿಯಲ್ಲ. ನಂಜಪ್ಪ ರವರ ಭಾಗಕ್ಕೆ ಹೋಗಿದ್ದ ಜಮೀನಿನ ಉತ್ತರ ದಿಕ್ಕಿನಲ್ಲಿ ನಂಜಪ್ಪ ಮತ್ತು ಅವರ ಮಕ್ಕಳು ಉಳುಮೆ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 25 ಗುಂಟೆ ಜಮೀನಿನ ಸ್ವಾಧೀನ ಹೊಂದಿ ಅನುಭವಿಸಿಕೊಂಡು ಬರುತ್ತಿದ್ದರು ನಾನು ಮತ್ತು ವಾದಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇರದೇ ಇದ್ದರೂ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.

ಹೊಸಕೋಟೆ.